# ಬಣ್ಣದ ಲೋಕದ ಮೋಹಕ ಜಾಲ

ರಾತ್ರಿ ಉಳಿದುಕೊಂಡಿದ್ದ ಹೋಟೆಲಿನ ಉಪಾಹಾರಗೃಹದ ರುಚಿ, ಸ್ವಚ್ಛತೆ ಎಲ್ಲರಿಗೂ ಹಿಡಿಸಿತ್ತು. ಅಲ್ಲಿಯೇ ಎಲ್ಲರಿಗೂ ಹೊಟ್ಟೆತುಂಬಾ ಉಪಾಹಾರ ಮಾಡಿಸಿಕೊಂಡು ಕಾರಿನತ್ತ ಬಂದ ನಾಯ್ಡು. ಹತ್ತು ನಿಮಿಷದಲ್ಲಿ ಟೌನ್ ದಾಟಿ ಮನೆಗಳು ವಿರಳವಾಗುತ್ತಾ, ಅಕ್ಕಪಕ್ಕದಲ್ಲಿ ಮರಮಟ್ಟೆಗಳು ತುಂಬಿದ ಕಾಡು ಆವರಿಸಿಕೊಂಡಿತು. ವಿಜಯದಶಮಿ ನಿನ್ನೆಯಷ್ಟೆ ಮುಗಿದಿತ್ತು. ಆಕಾಶದಲ್ಲಿ ಕಾರುಬಾರು ನಡೆಸಿ ಸುಸ್ತಾದ ಮಳೆಮೋಡಗಳು ನಿಧಾನವಾಗಿ ರಂಗಸ್ಥಳ ಖಾಲಿ ಮಾಡುತ್ತ, ಶರದೃತುವಿನ ನೀಲಿ ಬಾನು ಸೂರ್ಯನ ಬೆಳಕಲ್ಲಿ ಮುಳುಗೇಳುತ್ತ ವಿಹರಿಸಲು ತವಕಗೊಳ್ಳುತ್ತಿತ್ತು. ರಸ್ತೆಯುದ್ದಕ್ಕೂ ಹಸಿರುಕ್ಕುವ ಪರಿಸರದಲ್ಲಿ ಆಹ್ಲಾದ ಮೈಮುರಿಯುತ್ತಿತ್ತು.

‘ಚಂದನಿಕಾ, ಹೇಗನಿಸ್ತಿದೆ ಪರಿಸರ?’ ಕೇಳಿದ. ಪಕ್ಕದಲ್ಲಿದ್ದವಳು ಉತ್ತರಿಸದ್ದು ಕಂಡು ಎಡಗೈಯಿಂದ ಅವಳ ತೊಡೆ ತಟ್ಟಿ, ‘ನಿನ್ನನ್ನೇ ಕೇಳಿದ್ದು. ಮದನಾಂಬಾ ಅನ್ನೋ ಹಳೆ ಹೆಸರನ್ನು ನೀನಿನ್ನು ಮರೆತುಬಿಡಬೇಕು ಚಂದನಿಕಾ. ಈ ಫೀಲ್ಡಿಗೆ ಪಾದರಸದ ಚುರುಕು ಬೇಕು!’

‘ಸರ್, ಆಚೀಚೆ ಎಷ್ಟು ಚೆನ್ನಾಗಿದೆ! ಅದರಲ್ಲೇ ಕಳೆದುಹೋಗಿಬಿಟ್ಟಿದ್ದೆ.’

‘ಹುಂ’ ಅಂತ ನಸುನಕ್ಕ ನಾಯ್ಡು ‘ಗೋಪಾಲ್... ಯಾವದಕ್ಕೂ ಕಥೆದೊಂದು ಪ್ರತಿ ತಗೊಂಡಿದೀರಲ್ವ?’ ಕೇಳಿದ.

